# ಬದುಕು ಪತಂಗ

ಭರ್ರನೆಂದು ಓಡಿ ಬಂದು
ಕುದುರೆಗಾಡಿ ಹತ್ತಿ ನಿಂದು
ಪುರ್ರನೆಂದು ಗಾಳಿಪಟವ
ಹಾರಿಬಿಟ್ಟರು.

ಗುರ್ ಎನ್ನುವ ಉದರದ ಕೂಗು
ಮನಕೆ ತಾಕದಿರಲಿ ಎಂದು
ಸರ್ರನೆಂದು ಪಟದ ದಾರ
ಕೈಯಲ್ಲಿಟ್ಟರು.

ಬಾಜಾಬಜಂತ್ರಿಗಳಿಲ್ಲ
ಮದುವೆ ದಿಬ್ಬಣಗಳಿಲ್ಲ
ಹೆಮ್ಮಾರಿಯು ಕೆಲಸ ಕದಿಯೆ
ಬದುಕು ಬೆಂದಿತು.

ಸುಯ್ಯೆಂದು ಮೇಲೆ ಏರಿ
ಹುಯ್ಯೋ ಎಂದು ನೆಲವ ಸವರಿ
ಪಟದ ಆಟದಲಿ ಚಿಣ್ಣರು
ಕಾಲ ಮರೆತರು.

● **ಅಪರ್ಣಾ ಆರ್.ವಿ.**

# ಗೆಳೆಯರು

ಕುದುರೆ ಇಲ್ಲದ ಸಾರೋಟು ಏರಿ
ಕುಂತೆವು ನಾವು ನಾಲ್ವರು ಗೆಳೆಯರು
ಗೋಪಿ, ಶಶಿ, ಮಂಜ, ಗಿರಿ
ಮಗನೊಂದಿಗೆ ಬಂದ ಗೌರಕ್ಕ
ಬಂದು ನಿಂತರು ಬಂಡಿಯ ಪಕ್ಕ

ಸಾರೋಟಿನ ಸೀಟು ಖಾಲಿ ಇತ್ತು
ಗೋಪಿ ನಿಂತು ಹಾರಿಸುತ್ತಿದ್ದ ಗಾಳಿಪಟ
ಎತ್ತರಕ್ಕೆ ಏರುತಲಿತ್ತು
ನಮ್ಮ ಕನಸುಗಳಂತೆ ತೇಲುತಿತ್ತು

ಶಾಲೆ ಪಾಠ ಸದ್ಯಕ್ಕಿಲ್ಲ ಬಿಡಿ
ಆಟಕ್ಕೆ ನಾವು ಸದಾ ರೆಡಿ
ಆನ್‌ಲೈನ್ ಕ್ಲಾಸು ಬೇಡ ಸ್ವಾಮಿ
ನಮ್ಮ ಹಳ್ಳಿಯ ಸೊಬಗನ್ನೊಮ್ಮೆ
ಬಂದು ನೋಡಿ

● **ಎಂ.ಎಸ್. ಯಶಸ್ವಿನಿ**

